ಉ) ಆಯಕಟ್ಟಿನಲ್ಲಿ ಬರುವ ನೀರು ಸರಬರಾಜಿಗಾಗಿ ಇರುವ ಜಮೀನುಗಳನ್ನು ಆಯಕಟ್ಟಿನಿಂದ ತೆಗೆದು ಹಾಕಲು ಸರಕಾರ ಆದೇಶ ನೀಡಿದೆಯೆ ? ಹಾಗಿದ್ದಲ್ಲಿ ಆ ಬಗ್ಗೆ ಯಾವಾಗ ಆದೇಶ ಹೊರಡಿಸಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು)

ಅ) ಮಂಜೂರಾದ ಯೋಜನೆ ಪ್ರಕಾರ ೫೨೨೩ ಹೆಕ್ಟೇರುಗಳು (೧೨,೯೦೦ ಎಕರೆಗಳು).

ಆ) ಳಳ೩೭ ಹೆಕ್ಟೇರುಗಳು (೧೦,೯೬೪ ಎಕರೆಗಳು)

ಇ) ಬಂದಿದೆ.

ಈ) ಸಾಲಿಯಾನ ನಿರ್ವಹಣಾ ಅನುದಾನ ನೀಡಿದ ಹಣದಲ್ಲಿ ಸಾಧ್ಯವಾದಷ್ಟು ದುರಸ್ತಿ ಕೆಲಸಗಳನ್ನು ಮಾಡಲಾಗುತ್ತಿದೆ.

ಉ) ಇಲ್ಲ.

ಮುಂಗಡ ಪತ್ರದಲ್ಲಿ ನೀರಾವರಿ ಯೋಜನೆಗಳಿಗೆ ಹಣ ಒದಗಿಸಿರುವ ಬಗ್ಗೆ.

೩೧೦. ಶ್ರೀ ಎಂ. ವೀರಯ್ಯ ಸ್ವಾಮಿ, (ಚಿಂಚೋಳಿ).--ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪ್ರಸ್ತುತ ವರ್ಷದ ಆಯವ್ಯಯ ಪಟ್ಟಿಯಲ್ಲಿ ಕೃಷ್ಣ (ಕೃಷ್ಣ ಮೇಲ್ದಂಡೆ ಯೋಜನೆಯೂ ಸೇರಿದಂತೆ) ಕಾವೇರಿ ಕೊಳ್ಳದ ನೀರಾವರಿ ಯೋಜನೆಗಳಿಗೆ ಒದಗಿಸಿರುವ ಹಣ ಎಷ್ಟು ;

ಆ) ಪ್ರಸ್ತುತ ವರ್ಷದ ಜುಲೈ ತಿಂಗಳ ಅಂತ್ಯದವರೆಗೆ ಈ ಯೋಜನೆಗಳ ಮೇಲೆ ಮಾಡಿದ ವೆಚ್ಚ ಎಷ್ಟು (ವಿವರಗಳನ್ನು ಕೊಡತಕ್ಕದ್ದು) ;

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).--

ಅ) ಪ್ರಸ್ತುತ ವರ್ಷದಲ್ಲಿ ನೀರಾವರಿ ಯೋಜನೆಗಳಿಗೆ ನಿಗದಿಗೊಳಿಸಿರುವ ಹಣ ಕೆಳಕಂಡಂತಿರುವುದು.

ಕೃಷ್ಣ ಕೊಳ್ಳದ ಯೋಜನೆಗಳಿಗೆ ೧೮೫.೩೭ ಕೋಟಿ ರೂಪಾಯಿಗಳು. ಕಾವೇರಿ ಕೊಳ್ಳದ ಯೋಜನೆಗಳಿಗೆ ೧೧೫.೮೭ ಕೋಟಿ ರೂಪಾಯಿಗಳು.

ಆ) ಪ್ರಸ್ತುತ ವರ್ಷದ ಜುಲೈ ೮೭ರ ಅಂತ್ಯದವರೆಗೆ ನೀರಾವರಿ ಯೋಜನೆಗಳ ಮೇಲೆ ಆಗಿರುವ ವೆಚ್ಚ ಕೆಳಕಂಡಂತಿದೆ.

ಕೃಷ್ಣಾ ಕೊಳ್ಳದ ಯೋಜನೆಗಳ ಮೇಲೆ ೨೭.೦೪ ಕೋಟಿ ರೂಪಾಯಿಗಳು. ಕಾವೇರಿ ಕೊಳ್ಳದ ಯೋಜನೆಗಳ ಮೇಲೆ ೧೯.೮೧ ಕೋಟಿ ರೂಪಾಯಿಗಳು.

ರಾಜ್ಯದಲ್ಲಿ ಶಿಕ್ಷಣವು ಬಹುಮಟ್ಟಿಗೆ ವ್ಯಾಪಾರಕ್ಕಿಳಿದಿರುವ ಬಗ್ಗೆ.

೩೧೬. ಶ್ರೀ ಎಂ. ವೀರಯ್ಯ ಸ್ವಾಮಿ (ಚಿಂಚೋಳಿ).--ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಶಿಕ್ಷಣವು ಬಹುಮಟ್ಟಿಗೆ ವ್ಯಾಪಾರಕ್ಕಿಳಿದಿದೆ ಮತ್ತು ಪೂರ್ವ ಪ್ರಾಥಮಿಕದಿಂದ ಕಾಲೇಜಿನವರೆಗಿನ ಪ್ರತಿಯೊಂದು ಶಾಲೆಯೂ, ವಿವಿಧ ಹೆಸರುಗಳಲ್ಲಿ, ತಾಯಿತಂದೆಗಳಿಂದ ಹಣವನ್ನು ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಶಿಕ್ಷಣದ ಹೆಸರಿನಲ್ಲಿ ತಾಯಿ ತಂದೆಗಳನ್ನು ಸುಲಿಗೆ ಮಾಡುತ್ತಿರುವ ಈ ದುಷ್ಟ ಪದ್ಧತಿಯನ್ನು ತಡೆಯಲು ಸರ್ಕಾರ ಯೋಜಿಸುತ್ತಿದೆಯೇ ?